**ದಿನಾಂಕಃ 16-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಹೆಚ್ ಬಿ ಡಿ ವಕೀಲರಿಂದಃ**

ಪ್ರತಿವಾದಿ ನಂ. 2 ಅಶೋಕ ಬಜಾರಿಮಠ ಮತ್ತು ನಾನು ಕುಲಸ್ಥರು ಎಂದರೆ ಸರಿಯಲ್ಲ. ನಮ್ಮ ಸಂಬಂಧಿಕರು ಎನ್ನುವುದು ಸರಿಯಲ್ಲ. ದಾವಾ ಆಸ್ತಿ ಪ್ಲಾಟ್ ನಂ. 41 ಮತ್ತು 44 ಇವುಗಳನ್ನು ಪ್ರತಿವಾದಿ ನಂ. 1 ಮಹಾಂತೇಶ ಬಜಾರಿಮಠರವರ ಕಡೆಯಿಂದ ಖರೀದಿಸಿದ್ದೇವೆ. ಸದರಿ ಪ್ಲಾಟುಗಳು ಪ್ರತಿವಾದಿಯರ ಒಟ್ಟು ಕುಟುಂಬದ ಆಸ್ತಿಗಳು ಎನ್ನುವುದು ಸರಿಯಲ್ಲ. ಅವುಗಳು ಮಹಾಂತೇಶ ಬಜಾರಿಮಠನ ಸ್ವಯಾರ್ಜಿತ ಆಸ್ತಿಗಳು ಇವೆ. ಅವುಗಳನ್ನು ಆತ ಖರೀದಿಸಿದ್ದ. ಮಹಾಂತೇಶ ಆತನ ತಮ್ಮ, ತಂದೆ ಸೇರಿ ಎನ್ ಎ ಮಾಡಿಸಿದ ಎಂದರೆ ಇರಬಹುದು ಆದರೆ ಮಹಾಂತೇಶ ಇತನೇ ಅವುಗಳನ್ನು ಖರೀದಿಸಿದ್ದಾನೆ.

2. ಈ ಪ್ಲಾಟು ಇರುವ ಹೊಲ ಸರ್ವೇ ನಂ. 92/1 ಕ್ಷೇತ್ರ 3 ಎಕರೆ ಮಹಾಂತೇಶ ಇತನ ತಂದೆ ಚಂದ್ರಶೇಖರಯ್ಯ ಬಜಾರಿ ಮಠ ಹೆಸರಿನಲ್ಲಿತ್ತು ಎಂದರೆ ಸರಿ, ಆದರೆ ಮಹಾಂತೇಶ ಇತ ಪ್ಲಾಟು ಎಂದು ನಮಗೆ ಮಾರಿದ್ದಾನೆ ಎನ್ನುತ್ತಾರೆ. ತಂದೆ ಮತ್ತು ಮಕ್ಕಳು 2004 ರಲ್ಲಿ ಮೌಖಿಕ ವಾಟ್ನಿ ಮಾಡಿಕೊಂಡರು ಎಂದರೆ ಗೊತ್ತಿಲ್ಲ, ಆದರೆ ಈ ಪ್ಲಾಟು ಮಾತ್ರ ನಮಗೆ ತೋರಿಸಿ ಮಾರಿದ್ದಾರೆ. ಈ ಪ್ಲಾಟುಗಳನ್ನು ನಾನು 2006 ರಲ್ಲಿ ಖರೀದಿಸಿದ್ದೇನೆ.

3. ಈ ಪ್ಲಾಟುಗಳು ಪ್ರತಿವಾದಿ ನಂ. 2 ಅಶೋಕ ಬಜಾರಿಮಠರವರ ಹಿಸ್ಸೆಗೆ ಬಂದಿವೆ ಎಂದು ನನಗೆ ಗೊತ್ತಾಗಿದೆ ಎಂದರೆ ಸರಿಯಲ್ಲ. ಅವುಗಳು ನನ್ನ ತಿಳುವಳಿಕೆ ಪ್ರಕಾರ ಮಹಾಂತೇಶ ಬಜಾರಿಮಠ ರವರ ಪಾಲಿಗೆ ಬಂದಿವೆ. ದಿಃ- 21-08-2008 ರಂದು ನಾನು ಪ್ರತಿವಾದಿ ನಂ. 2 ಇವರಿಗೆ ಈ ಪ್ಲಾಟ್ ನಂ. 41 ಮತ್ತು 44 ರ ಕುರಿತು ನೊಂದಾಯಿತವಲ್ಲದ ಹಕ್ಕು ಬಿಟ್ಟು ಕೊಟ್ಟ ಪತ್ರ ಬರೆದು ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ. ಆ ಪ್ಲಾಟು ಖರೀದಿಸಲು ನಾನು ಕೊಟ್ಟಿದ್ದ 1,30,000/- ರೂಪಾಯಿ ಅಶೋಕ ಬಜಾರಿಮಠ ಕಡೆಯಿಂದ ವಾಪಸ್ಸು ಪಡೆದಿದ್ದೇನೆ ಎನ್ನುವುದು ಸರಿಯಲ್ಲ.

4. ಪ್ಲಾಟ್ ನಂ. 41 ಮತ್ತು 44 ರಲ್ಲಿ ಮನೆ ಕಟ್ಟಿದ್ದಾರೆ ಎಂದರೆ ಸರಿಯಲ್ಲ. ಪ್ಲಾಟ್ ನಂ. 41 ರಲ್ಲಿ ಪ್ರತಿವಾದಿ ನಂ. 3 ಚೌರಪ್ಪ ಕಟ್ಟಿದ್ದಾರೆ. ಆದರೆ 2 ಜಾಗೆಗಳು ಖಾಲಿ ಅಂತಾ ಕೇಸು ಹಾಕಿದ್ದೇವೆ ಎಂದರೆ ಸರಿ. ಕೇಸು ಹಾಕಿದ ಕಾಲಕ್ಕ 2 ಜಾಗೆಗಳಲ್ಲಿ ಮನೆಗಳು ಇದ್ದವು ಎಂದರೆ ಸರಿಯಲ್ಲ. ಪ್ಲಾಟ್ ನಂ . 41 ರಲ್ಲಿ ಮಾತ್ರ ಚೌರಪ್ಪ ಮನೆ ಕಟ್ಟಿಸಿದ್ದ. ಪ್ರತಿವಾದಿ ನಂ. 2 ರಿಂದ 6 ಪಂಚಾಯಿತಿ ಅಧಿಕಾರಿಗಳೊಂದಿಗೆ ಶ್ಯಾಮಿಲಾಗಿ ಈ ಪ್ಲಾಟ್ ನಂ. 41 ಮತ್ತು 44 ನ್ನು ವರ್ಗಾವಣೆ ಮಾಡಿದ್ದಾರೆ ಎಂದು ಸುಳ್ಳು ಹೇಳಿದೆ ಎಂದರೆ ಸರಿಯಲ್ಲ.

5. ನಾನು ನಮ್ಮ ಸೈಟ್ ಬೇಕು ಎಂದು ಕೇಸು ಮಾಡಿದ್ದೇನೆ, ನನಗೆ ಮನೆ ಬೇಕಿಲ್ಲಾ. ಖಾಲಿ ಜಾಗಕ್ಕೆ ಮಾತ್ರ ಕೋರ್ಟ ಫೀ ಕಟ್ಟಿದ್ದೇನೆ ಎಂದರೆ ಸರಿ. ಈಗ ಆ ಜಾಗಗಳ ಮೇಲೆ ತಲಾ 11 ಲಕ್ಷ ಆಗಬಹುದು. ಈಗ ಆ ಜಾಗೆಗಳ ಬೆಲೆ ತಲಾ 15 ಲಕ್ಷ ಎಂದರೆ ನನಗೆ ಗೊತ್ತಿಲ್ಲ. ನಾನೇ ಹಕ್ಕು ಬಿಟ್ಟು ಕೊಟ್ಟೆ ಎಂದರೆ ಸರಿಯಲ್ಲ. ಅದರ ಆಧಾರದಲ್ಲಿ ಪ್ರತಿವಾದಿ ನಂ. 2 ಅಶೋಕ ಬಜಾರಿಮಠ ಪ್ಲಾಟ್ ನಂ. 41 ನ್ನು ಪ್ರತಿವಾದಿ ನಂ. 3 ಚೌರಪ್ಪನಿಗೆ ಮಾರಿದ ಎಂದರೆ ಸರಿಯಲ್ಲ ಮತ್ತು ಅದೇ ಹಕ್ಕು ಬಿಟ್ಟು ಕೊಟ್ಟ ಪತ್ರದ ಆಧಾರದಲ್ಲಿ ಪ್ರತಿವಾದಿ ನಂ 1 ಅಶೋಕ ಪ್ರತಿವಾದಿ ನಂ. 4 ರಿಂದ 6 ಕ್ಕೆ ಮಾರಿದ ಎಂದರೆ ಸರಿಯಲ್ಲ.

6. ಈಗ ಪ್ಲಾಟ್ ಗಳ ಬೆಲೆ ಹೆಚ್ಚಾಗಿದ್ದರಿಂದ ತಡ ಮಾಡಿ ಸುಳ್ಳು ಕೇಸು ಮಾಡಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.
ಸಹಿ/-
**ಹಿರಿಯ ವ್ಯವಹಾರ ನ್ಯಾಯಾಧೀಶರು,**
**ಕೊಪ್ಪಳ.**